INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-6, Issue -1, January-February, 2024,
PageNo,27- 31
Peer -Reviewed, Refereed Journal

# ಚಾಮರಾಜನಗರ ಜಿಲ್ಲೆಯ ಹೊಯ್ಸಳರ ಕಾಲದ ಶಾಸನಗಳಲ್ಲಿ ಜೈನಧರ್ಮದ ಪ್ರಭಾವ

*ಪದ್ಮಾವತಿ.[1]
**ಡಾ.ಸಿ.ಈ.ಲೋಕೇಶ [2]

ಕರ್ನಾಟಕದ ರಾಜ್ಯದ 30 ಜಿಲ್ಲೆಗಳಲ್ಲಿ ಒಂದಾದ ಚಾಮರಾಜನಗರ ಜಿಲ್ಲೆಯು ಐತಿಹಾಸಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಹೊಂದಿದ್ದು ಈ ಜಿಲ್ಲೆಯನ್ನು 1997 ರಲ್ಲಿ ಮೈಸೂರು ಜಿಲ್ಲೆಯಿಂದ ವಿಭಜಿಸಿ ಪ್ರತ್ಯಕ ರಾಜ್ಯವನ್ನಾಗಿ ರಚಿಸಲಾಯಿತು ಈ ಜಿಲ್ಲೆಯು ಕೇರಳ ಮತ್ತು ತಮಿಳುನಾಡು ರಾಜ್ಯಗಳನ್ನು ಗಡಿಯನ್ನಾಗಿ ಒಳಗೊಂಡಿದ್ದು ಪ್ರಸ್ತುತ ಕರ್ನಾಟಕದ ದಕ್ಷಿಣ ಭಾಗದ ಕೊನೆಯ ಜಿಲ್ಲೆಯಾಗಿದೆ. ಈ ಜಿಲ್ಲೆಯಲ್ಲಿ ಇತಿಹಾಸ ಪ್ರಸಿದ್ದ ಮಲೆಮಹದೇಶ್ವರರ ಗದ್ದುಗೆ, ಪುರಾಣ ಪ್ರಸಿದ್ಧಿಯ ದಕ್ಷಿಣ ಗೋವರ್ಧನಗಿರಿ ಹಿಮವದ್ ಗೋಪಾಲಸ್ವಾಮಿ ಬೆಟ್ಟ, ವೈಷ್ಣವ ಖ್ಯಾತಿಯ ಬಿಳಿಗಿರಿ ರಂಗಸ್ವಾಮಿ ಬೆಟ್ಟ ಮತ್ತು ಸ್ಕಂದಗಿರಿಯ ಪಾರ್ವತಿ ಬೆಟ್ಟಗಳಿಂದ ಸುತ್ತುವರೆದಿದೆ.

ಚಾಮರಾಜನಗರವು 1818ಕ್ಕೂ ಮೊದಲು 'ಅರಿಕುಠಾರ' ಎಂಬ ಹೆಸರನ್ನು ಹೊಂದಿತ್ತು. ಈ ಅರಿಕುಠಾರ ಎಂಬ ಹೆಸರಿನ ಉಲ್ಲೇಖವು ಚಾಮರಾಜನಗರದಲ್ಲಿ ದೊರೆಕಿರುವ ಹೊಯ್ಸಳರ ಕಾಲದ ಶಾಸನಗಳಲ್ಲಿ ಉಲ್ಲೇಖವಾಗಿದ್ದು, 1818ರ ನಂತರ ಇದನ್ನು 'ಚಾಮರಾಜನಗರ' ಎಂದು ಮರುನಾಮಕರಣ ಮಾಡಲಾಯಿತು. ಈ ಜಿಲ್ಲೆಯಲ್ಲಿ ಗಂಗರು, ಕಲ್ಯಾಣಿಚಾಲುಕ್ಯರ ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಉಮ್ಮತ್ತೂರಿನ ಪಾಳೆಗಾರರು ಮತ್ತು ಮೈಸೂರುಒಡೆಯರು ಆಡಳಿತವನ್ನು ನಡೆಸಿದ್ದು ಅವರ ರಾಜಕೀಯ ಇತಿಹಾಸವನ್ನು ಇಲ್ಲಿ ದೊರಕಿರುವ ಶಾಸನಗಳಿಂದ ಅಧ್ಯಯನಕ್ಕೊಳಪಡಿಸಲಾಗಿದೆ. ಈ ಲೇಖನದ ಉದ್ದೇಶವು ಚಾಮರಾಜನಗರದ ಜಿಲ್ಲೆಯಲ್ಲಿ ಹೊಯ್ಸಳರ ಕಾಲದ ಶಾಸನಗಳಲ್ಲಿ ಜೈನಧರ್ಮದ ಪ್ರಭಾವವನ್ನು ತಿಳಿಯುವುದಾಗಿದೆ.

ಹೊಯ್ಸಳರು ಪ್ರಾರಂಭದಲ್ಲಿ ಕಲ್ಯಾಣಿಚಾಲುಕ್ಯರ ಸಾಮಂತರಾಗಿ ನೆಲೆಗೊಂಡು ಮುಂದೆತಮ್ಮಶೌರ್ಯ ಹಾಗೂ ಸ್ವಸಾಮರ್ಥ್ಯದಿಂದ ರಾಜ್ಯ ವಿಸ್ತಾರ ಮಾಡಿ ಸ್ವತಂತ್ರರಾದ ಸುಸಂದರ್ಭದಲ್ಲಿತಮ್ಮ ಪ್ರಭಾವವನ್ನು

[1].ಸಂಶೋಧಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಮಾನಸ ಗಂಗೋತ್ರಿ ಮೈಸೂರು.
[2].ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ/ಪುರಾತತ್ವಶಾಸ್ತ್ರ ಮತ್ತು ವಸ್ತುಸಂಗ್ರಹಾಲಯ ವಿಭಾಗ ಮಹಾರಾಜ ಕಾಲೇಜು ಮೈಸೂರು

ತಮಿಳುನಾಡಿನವರೆವಿಗೂ ವಿಸ್ತರಿಸಿ ನಾಡಿನ ಆರ್ಥಿಕ,ಸಾಂಸ್ಕೃತಿಕ ರಂಗಗಳಲ್ಲಿ ಉನ್ನತ ಸಾಧನೆಗೆ ಪ್ರೋತ್ಸಾಹ ನೀಡಿ ಸುಮಾರು ಮೂರು ಶತಮಾನಗಳಿಗೂ ಹೆಚ್ಚು ಕಾಲ ವೈಭವಯುತವಾಗಿ ಮೆರೆದ ಸಾಮ್ರಾಜ್ಯವೆನ್ನಲಾಗಿದೆ.

ಹತ್ತನೇ ಶತಮಾನದಿಂದ ಹಿಡಿದು ಹದಿನಾಲ್ಕನೇ ಶತಮಾನದ ಮಧ್ಯದವರೆಗೆ ಸುಮಾರು ಮುನ್ನೂರು ವರ್ಷಗಳ ಕಾಲ ಆಡಳಿತ ನಡೆಸಿದ ಪ್ರಸಿದ್ಧ ರಾಜವಂಶ ಇದಾಗಿದ್ದು, ಚೋಳರನ್ನು ಸೋಲಿಸಿ ಅಧಿಕಾರಕ್ಕೆ ಬಂದರು.ಇವರ ಮೊದಲ ರಾಜಧಾನಿ ಶಶಾಕಪುರ ಅಥವಾ ಸೊಸೆವೂರು ಆಗಿತ್ತು ಆನಂತರ ಬೇಲೂರು, ಹಳೆಬೀಡು, ರಾಜಧಾನಿಗಳಾದವು.ಸಳನಿಂದ ಪ್ರಾರಂಭವಾದ ಈ ಹೊಯ್ಸಳ ರಾಜವಂಶದಲ್ಲಿಒಂದನೇಯ ನರಸಿಂಹ,ಇಮ್ಮಡಿ ಬಲ್ಲಾಳ, ಸೋಮೇಶ್ವರ, ಮೂರನೇ ನರಸಿಂಹ ಮತ್ತು ಮುಮ್ಮಡಿ ಬಲ್ಲಾಳ ಪ್ರಮುಖರಾಜರು ಇಲ್ಲಿ ಆಳ್ವಿಕೆ ನಡೆಸಿದ್ದಾರೆ.ಆದರೆ ಚಾಮರಾಜನಗರ ಪ್ರಾಂತ್ಯದಲ್ಲಿ ಹೊಯ್ಸಳರ ಆಳ್ವಿಕೆಗೆ ಸಂಬಂಧಿಸಿದಂತೆ ವಿಷ್ಣುವರ್ಧನನ ಕಾಲಘಟ್ಟದ ಶಾಸನಗಳು ದೊರತಿದ್ದು ಈ ಪ್ರಾಂತ್ಯದಲ್ಲಿ ಆಳ್ವಿಕೆ ನಡೆಸಿದ ಹೊಯ್ಸಳ ರಾಜರು ವೈಷ್ಣವ, ಶೈವ ಧರ್ಮಕ್ಕೆ ಪ್ರೋತ್ಸಾಹ ನೀಡಿದಂತೆ ಜೈನಧರ್ಮಕ್ಕೂ ಪ್ರೋತ್ಸಾಹ ಕೊಟ್ಟಿದ್ದರು ಎಂಬುದಕ್ಕೆ ಈ ಜಿಲ್ಲೆಯಲ್ಲಿ ಕಂಡುಬಂದಿರುವ ಜೈನಶಾಸನಗಳು, ಜೈನಸಾಹಿತ್ಯ ಗ್ರಂಥಗಳು, ಜೈನಬಸದಿಗಳು, ಶಿಲ್ಪಗಳು, ಜೈನಕವಿಗಳು, ಜೈನಮುನಿಗಳು, ಜೈನಅಧಿಕಾರಿಗಳು ಹಾಗೂ ಜೈನಧಾರ್ಮಿಕ ಕೇಂದ್ರಗಳೇ ಪ್ರತ್ಯಕ್ಷ ಸಾಕ್ಷಿಯಾಗಿವೆ. ಈ ಚಾಮರಾಜನಗರ ಜಿಲ್ಲೆಯಲ್ಲಿ ಹೊಯ್ಸಳರು ಅವರ ಆಡಳಿತದ ಸಮಯದಲ್ಲಿ ಹೊರಡಿಸಿರುವ ಶಾಸನಗಳಿಂದ ಆ ಪ್ರದೇಶದಲ್ಲಿ ಜೈನಧರ್ಮದ ಸ್ಥಿತಿಗತಿಯನ್ನು ತಿಳಿಯುವುದಾಗಿದೆ.

ದಕ್ಷಿಣ ಭಾರತದ ಜೈನಧರ್ಮದ ಇತಿಹಾಸವೆಂದರೆ ಕರ್ನಾಟಕದ ಜೈನಧರ್ಮದ ಇತಿಹಾಸವೇ ಆಗಿದೆ. ಪ್ರಾಚೀನ ಕರ್ನಾಟಕದಲ್ಲಿ ಜೈನಧರ್ಮವು ಪ್ರಬಲವಾದ ಧರ್ಮವಾಗಿತ್ತು. ಕ್ರಿ.ಶ.ದ ಆದಿ ಶತಮಾನಗಳಿಂದ ಹತ್ತನೆಯ ಶತಮಾನದವರೆಗೂ ಇದ್ದ ಕಾಲವನ್ನು ಜೈನಧರ್ಮದ 'ಸುವರ್ಣಯುಗ'ಎನ್ನಬಹುದು. ಕರ್ನಾಟಕದಲ್ಲಿ ದೊರೆಯುವ ನೂರಾರು ಶಾಸನಗಳಲ್ಲಿ ಜೈನಧರ್ಮದ ಕುರಿತಾದ ಮಹತ್ವದ ದಾಖಲೆಗಳಿವೆ. ಹಲವು ಶಾಸನಗಳಂತೂ ಜೈನಧರ್ಮದ್ದೆಯಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಈ ಜಿಲ್ಲೆಯಲ್ಲಿ ಕಂಡುಬಂದಿರುವ ಜೈನ ಶಾನನಗಳ ಸಂಪೂರ್ಣ ಮಾಹಿತಿಯನ್ನು ಈ ಕೆಳಕಂಡಂತೆ ನಿರೂಪಿಸಲಾಗಿದೆ.

ಚಾಮರಾಜನಗರದ ಪಾರ್ಶ್ವನಾಥ ಬಸದಿಯಲ್ಲಿರುವ ಕಲ್ಲಿನಲ್ಲಿ ಬರೆಸಿರುವ ಕ್ರಿ.ಶ.1116 ಶಾಸನವು ಹೊಯ್ಸಳ ವಿಷ್ಣುವರ್ಧನನು ಗಂಗವಾಡಿ–96,000 ಮತ್ತು ಕೊಂಗುನಾಡನ್ನು ರಾಜಧಾನಿ ತಲಕಾಡು ಮತ್ತು ಕೊಲ್ಲಾಪುರದಿಂದ ಆಳುತ್ತಿದ್ದ ಸಮಯದಲ್ಲಿ ಹೊರಡಿಸಲಾಗಿದೆ. ಈ ಶಾಸನದಲ್ಲಿ ತ್ರಿಕೂಟ ಬಸದಿಯಾದ ಪುಣಿಸ ಜಿನಾಲಯಕ್ಕೆ ಭೂಮಿ ಎಣ್ಣೆ ಮತ್ತು ಗಿರಣಿಯನ್ನು ದಾನ ನೀಡಿರುವ

ವಿಷಯವನ್ನು ಹಾಗೂ ಪುಣಿಸರಾದ ದಂಡಾದೀಪನು ಎಣ್ಣೆನಾಡಿನ ಅರಿಕುಠಾರದ ಇತರ ಬಸದಿಗಳ ಸ್ಥಾಪನೆಗೆ ಕಾರಣನಾದ ವಿಷಯವನ್ನು ತಿಳಿಸುತ್ತದೆ.ಇವರಲ್ಲಿ ಮೊದಲಿಗನಾದ ಚಾಮಚಮೂಪ ಆತನ ಮಗ ಪುಣಿಸ ಚಮೂಪ ಆತನಿಗೂ ಆತನ ಪತ್ನಿ ಪೋಚಲೆಗೂ ಚಾಮರಾಜ ನಾಕಣ(ನಾಗದೇವ), ಮತ್ತು ಕುಮಾರಯ್ಯರೆಂಬ ಪುತ್ರರು ಜನಿಸಿದರು ಹಿರಿಯನಾದ ಚಾಮರಾಜನಿಗೆ ಅರಸಕಬ್ಬೆ ಮತ್ತು ಚಾಂಡಲೆಯರೆಂಬ ಇಬ್ಬರು ಪತ್ನಿಯರು ಅವರಿಗೆ ಕ್ರಮವಾಗಿ ಪ್ರಸ್ತುತ ಶಾಸನದ ದಾನಿಯಾದ ಪುಣಿಸಯ್ಯ ಮತ್ತು ಬಿಟ್ಟಿಗನು ಜನಿಸಿದರು. ಎರಡನೆ ಪುಣಿಸಯ್ಯನ ಮಗನೂ ಸಹ ಬಿಟ್ಟಿಗನಾಗಿದ್ದಾನೆ. ಈ ಶಾಸನವು ಪುಣಿಸಮ"ಪುಣಿಸಮಯ್ಯ" ಎಂಬ ಹೆಸರೇಇರುವ ಅವನ ತಾತನು "ಶಾಸನವಾಚಕ ಚಕ್ರವರ್ತಿ"ಎಂದು ವರ್ಣಿಸಲಾಗಿದೆ. ಇಮ್ಮಡಿ ಪುಣಿಸ ಚಮೊಪನು ಚಾಮರಾಜನಗರದಲ್ಲಿರುವ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿದನಲ್ಲದೇ ಗಂಗವಾಡಿ–96,000ರ ಬಸದಿಗಳನ್ನು ಊರ್ಜಿತಗೊಳಿಸಿದನೆಂದು ಶಾಸನವು ತಿಳಿಸುತ್ತದೆ. ಅದೇ ಪಾರ್ಶ್ವನಾಥ ಸ್ವಾಮಿ ಬಸ್ತಿಯ ಪ್ರಕಾರದಲ್ಲಿ ಪಶ್ಚಿಮದ ಕಡೆ ನೆಟ್ಟಿರುವಕಲ್ಲಿನಲ್ಲಿ ಕೆತ್ತಿರುವ ಕ್ರಿ.ಶ.1281ರ ಶಾಸನವು ಹೊಯ್ಸಳ ವೀರ ನರಸಿಂಹನ ಕಾಲದಲ್ಲಿ ಹೊರಡಿಸಲಾಗಿದ್ದು ಅಲ್ಲಾಳ ಗಾವುಂಡನ ಮಗ ದಾಸಗಾವುಂಡ ಮತ್ತು ಕೇತಗಾವುಂಡ ಬಿಟ್ಟಿಗಾವುಂಡರು ಈ ಪ್ರದೇಶದ ಗೃಹ ಕಂದಾಯ ನೀರಿನ ಕಂದಾಯವನ್ನು ಅರಿಕುಠಾರದ ಬಸದಿಗೆ ಆದಾಯಕ್ಕಾಗಿ ಬಿಟ್ಟುಕೊಟ್ಟಿರುವ ವಿಷಯವನ್ನು ತಿಳಿಸುತ್ತದೆ.

ಕುಲಗಾಣ ಗ್ರಾಮಕ್ಕೆ ಈಶಾನ್ಯದ ಹೊಲವೊಂದರಲ್ಲಿ ದೊರಕಿರುವ ಕ್ರಿ.ಶ.1173ರ 2ನೇ ವೀರ ಬಲ್ಲಾಳನ ಕಾಲದಲ್ಲಿ ಹೊರಡಿಸಿರುವ ಶಾಸನವು ಮುದಿಗೊಂಡ ಚೋಳ ಮಂಡಲದ ಗಂಗೈಕೊಂಡ ಚೋಳ ವಲನಾಡಿನ ಇದೈನಾಡು(ಪೆರಿಯನಾಡು) ಪ್ರದೇಶದ60 ಪ್ರಭುಗಾವುಂಡರು ಕುಲ್ಲಗಾಣ ಬಸದಿಗೆ ದಾನ ನೀಡಿದ ವಿಚಾರವನ್ನು ಹಾಗೂ ದಾನವನ್ನು ಮಹಾಮಂಡಲಚಾರ್ಯ ಶ್ರೀಪಾದಿರಾಜದೇವನ ಶಿಷ್ಯ ಸಿಂಗಣದೇವ ಎಂಬುವನು ಸ್ವೀಕರಿಸಿದನೆಂದು ತಿಳಿಸುತ್ತದೆ.ಅದೇ ಗ್ರಾಮದ ಅದೇ ಹೊಲದಲ್ಲಿ ಇನ್ನೊಂದು ಶಾಸನವು ದೊರೆತ್ತದ್ದು ಇದು ಕ್ರಿ.ಶ.1241ರಲ್ಲಿನ ಈ ಶಾಸನದಲ್ಲಿ ಮಹಪ್ರಧಾನ ಸೇನಾಧಿಪತಿ ಸರ್ವಾಧಿಕಾರಿ ಕೇತೇಯ ದಣ್ಣಾಯಕನು ಕುಲಗಾಣದ ಬಸದಿಗೆ ತೆರಿಗೆಯಿಂದ ಬಂದ ಆದಾಯವನ್ನು ದಾನ ನೀಡಿದ ವಿಷಯವನ್ನು ತಿಳಿಸುತ್ತದೆ.

ಹಳೆ ಆಲೂರಿನ ಸುವರ್ಣಾವತಿ ನದಿ ತೀರದ ಮಂಟಪದಲ್ಲಿರುವ ಕಲ್ಲಿನಲ್ಲಿ ಕ್ರಿ.ಶ.1278 ರ ಶಾಸನವು ದೊರಕಿದ್ದು ಹೊಯ್ಸಳರ 3ನೇ ಬಲ್ಲಾಳನ ಕಾಲದಲ್ಲಿ ಹೊರಡಿಸಿರುವ ಶಾಸನವಾಗಿದ್ದು ಇದರಲ್ಲಿ 'ದಕ್ಷಿಣ ಐಹೊಳೆ' ಎಂದು ವರ್ಣಿಸಲಾಗಿರುವ ಚಂದ್ರವನಿತ ಬಸದಿಯನ್ನು ಉದ್ಘಾಟಿಸಿದರು ಮತ್ತು ಮಲ್ಲಿ ಸೇನ ಮುಲ್ಲಾದಾರಿ ಪರಿಸದೇವನ ಮಕ್ಕಳಿಂದ ಅರಿಯಣ ಮತ್ತು ಚೆಲುವಣ್ಣನವರಿಗೆ ಹಸ್ತಾಂತರಿಸಲಾಯಿತು, ಇದನ್ನು ಪೂಜಾ ಕೈಂಕಾರ್ಯಕ್ಕಾಗಿ ಭೂಮಿ ಮತ್ತು ಹೂದೋಟವನ್ನು ಹಾಗೂ ಮನೆಯನ್ನು ದಾನವಾಗಿ ನೀಡಲಾಗಿರುವ ವಿಷಯವನ್ನು ಶಾಸನದಲ್ಲಿ ಉಲ್ಲೇಖಿಸಲಾಗಿದೆ ಹಾಗೇಯೇ

ಮಲೆಯೂರು ಪಾರ್ಶ್ವನಾಥ ಬಸದಿಯ ಪ್ರಾಕಾರದ ಚಪ್ಪರದ ಮಂಟಪದಲ್ಲಿರುವ ಕ್ರಿ.ಶ.1181ರ ಶಾಸನವು ಕನಕಾಚಲದಲ್ಲಿರುವ ಪಾರ್ಶ್ವನಾಥನಿಗೆ ಪಂಚಪರ್ವ ಆಚರಣೆ ಸಮಯದಲ್ಲಿ 'ಜೀನೇಂದ್ರ ಪಾದಾಂಭುಜ ಭಕ್ತಿಯುಕ್ತಾ ಜಿನಭಕ್ತಳಾದ ಧರ್ಮಾರ್ಥ ಕಾಮ ಗುಣಶೀಲಗಳಿಂದ ಪರಿಶುದ್ಧಳಾದ ಚಿಕ್ಕತಾಯಿ'ಎಂಬುವಳು ದೇವರಪೂಜೆ ಮತ್ತು ವ್ರತಬದ್ಧರದ ಮುನಿಗಳ ನಿತ್ಯದ ಆಹಾರಧಾನ್ಯಕ್ಕಾಗಿ ಮತ್ತು ಶಾಸ್ತ್ರದಾನಕ್ಕಾಗಿ ಕಿನರಿಪುರವೆಂಬ ಗ್ರಾಮವೂಂದನ್ನು ದತ್ತಿಯಾಗಿ ಬಿಟ್ಟಳು ಎಂದು ತಿಳಿಸುತ್ತದೆ. ಈಕೆ ಅಚ್ಯುತರಾಜೇಂದ್ರನ ಮಗನಾದ ಅಚ್ಯುತವಿರೇಂದ್ರಕಶ್ಯಪನ ಪತ್ನಿ. ಇವಳು ಪ್ರಸಿದ್ಧ ವೈದ್ಯಳಾಗಿದ್ದಳು. ಈ ದಂಪತಿಗಳಿಗೆ ವಿದ್ಯಾಸಾಗರನೆಂಬ ಮಗನಿದ್ದು ಆತನೂ ವೈದ್ಯನಾಗಿದ್ದ ವಿಷಯವನ್ನು ಉಲ್ಲೇಖಿಸುತ್ತದೆ.

ಗುಂಡ್ಲುಪೇಟೆಯ ಕೋಟೇಯೊಳಗಿನ ಬಸ್ತಿಮಾಳದಲ್ಲಿ ನೆಟ್ಟಿರುವ ಕಲ್ಲಿನಲ್ಲಿರುವ ಶಾಸನವು 2ನೇ ಬಲ್ಲಾಳನ ಆಡಳಿತದ ಕಾಲದಲ್ಲಿ ಹೊರಡಿಸಿರುವ ಶಾಸನವಾಗಿದೆ. ಈ ಶಾಸನವು ಪ್ರಭುಗಾವುಂಡದ ಕುಡುಗುನಾಡು–300 ಪ್ರಾಂತ್ಯದ ಮಾದಹಳ್ಳಿ ಮತ್ತು ಇತರೆ ಅಕ್ಕಪಕ್ಕದ ಪ್ರದೇಶಗಳನ್ನು ತುಪ್ಪೂರಿನ ಬಸದಿಗೆ ಅಥವಾ ಭಟ್ಟಿಜಿನಾಲಯಕ್ಕೆ ದಾನ ಬಿಟ್ಟಿರುವ ವಿಚಾರವನ್ನು ತಿಳಿಸುತ್ತದೆ. ಈ ಪ್ರದೇಶವನ್ನು ಕುಮಾರ ಲಕ್ಷಣ ದಣ್ಣಾಯಕನು ಆಳುತ್ತಿದ್ದ ಮಾಹಿತಿಯನ್ನು ತಿಳಿಸುತ್ತದೆ.

ಕೆಲಸೂರಿನ ಕ್ರಿ.ಶ.1229 ಶಾಸನವು ಎರಡನೆಯ ನರಸಿಂಹನ ಕಾಲದಲ್ಲಿ ಬರೆಸಿದ ಶಾಸನವಾಗಿದೆ. ಗೋಪಯ್ಯ ಮತ್ತು ರಂಗಣ್ಣ ಕುಡುಗುನಾಡಿಲ್ಲಿರುವ ಬಸದಿಗೆ ಹಬ್ಬಕ್ಕಾಗಿ ದಾನ ನೀಡಿದ ವಿಚಾರವನ್ನು ದಾಖಲಿಸುತ್ತದೆ. ಕೊಲ್ಲಗಾಣದ ಹಿರಿಯನಾಡ ಮಹಾಪ್ರಭು ಶಂಕರ ಈ ಶಾಸನ ಬರೆಸಿದ್ದಾನೆ. ಮೂರನೇ ವೀರಬಲ್ಲಾಳನ ಕಾಲಕ್ಕೆ ಸೇರಿದ ಕ್ರಿ.ಶ.1320ರ ಶಾಸನ ಜೈನಶಾಸನವಲ್ಲದಿದ್ದರೂ ಇದು ಜೈನಧರ್ಮದ ಸ್ಥಿತಿಗತಿಯ ಪರಿಶೀಲನೆಗೆ ನೆರವಾಗಿದೆ. ಈ ಶಾಸನವು ರಾಘವಪುರದ ಮೊದಲಿನ ಹೆಸರು ಗೊಮ್ಮಟಹಳ್ಳಿ ಎಂಬುವುದಾಗಿತ್ತು.ಈ ಗೊಮ್ಮಟಹಳ್ಳಿಗೆ ಹೆಸರು ಬರಲು ಕಾರಣ ಅಲ್ಲಿ ಗೊಮ್ಮಟನ ಬಸದಿಯಿದ್ದು ಒಂದು ಕಾರಣವಾದರೆ ಮತ್ತೊಂದು ಕಾರಣ ಅಲ್ಲಿ ನಾರಣದೇವನ ತಂದೆ ರಾಘವದೇವನ ಹೆಸರಿನಲ್ಲಿ 'ರಾಘವಪುರ'ಎಂದು ಹೆಸರಾಗಿ ಅದೊಂದು ಅಗ್ರಹಾರವಾಗಿ ಪರಿವರ್ತಿತವಾಯಿತು ಎನ್ನಲಾಗಿದೆ. ಹಾಗೆಯೇ ಬಿಳಿಗಿರಿರಂಗನ ಬೆಟ್ಟದಲ್ಲಿ ದೊರೆಕಿರುವ ಕ್ರಿ.ಶ.1190 ರ ಶಾಸನವು ಹೊಯ್ಸಳ ವೀರ ಬಲ್ಲಾಳನ ಆಳ್ವಿಕೆಯಲ್ಲಿ ಬರೆಸಿರುವ ಶಾಸನವಾಗಿದೆ. ಈ ಶಾಸನದಲ್ಲಿ ಶುಭವಾಗಲಿ ಜಿನಸಿದ್ಧಾಂತವು ಜಯಶಾಲಿಯಾಗಲಿ ಕ್ಷೇಮವಾಗಲಿ ಎಂದು ಈ ಶಾಸನದಲ್ಲಿ ಮಾಹಿತಿ ಲಭ್ಯವಾಗಿದೆ.

ಒಟ್ಟಾರೆಯಾಗಿ ಈ ಮುಂದಿನ ಎಲ್ಲಾ ಅಂಶಗಳಿಂದ ಕರ್ನಾಟಕದ ಇತಿಹಾಸದ ಪುಟಗಳಲ್ಲಿ ಒಂದು ಮೈಲಿಗಲ್ಲನ್ನು ಸೃಷ್ಠಿಸಿದ ರಾಜ ಮನೆತನ ಹೊಯ್ಸಳರು. ಇವರು ಈ ಪ್ರದೇಶದ ನಾಡು, ನುಡಿ, ಕಲೆ, ಸಂಸ್ಕೃತಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ

ಕ್ಷೇತ್ರಗಳಿಗೆ ಕೊಡುಗೆಯನ್ನು ನೀಡಿದಂತೆ ಧಾರ್ಮಿಕ ಕ್ಷೇತ್ರಕ್ಕೂ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ವೈಷ್ಣವ ಮತ್ತು ಶೈವ ಪಂಥಕ್ಕೆ ಪ್ರೋತ್ಸಾಹ ನೀಡಿದಂತೆ ಜೈನಧರ್ಮಕ್ಕೂ ವಿಶೇಷ ಪ್ರೋತ್ಸಾಹ ನೀಡಿದ್ದರು. ಹೀಗಾಗಿಯೇ ಇವರ ಕಾಲದಲ್ಲಿ ಕರ್ನಾಟಕದಾದ್ಯಂತ ಹಲವಾರು ಬಸದಿಗಳು ನಿರ್ಮಾಣವಾದವು. ಮತ್ತು ಜೈನಮುನಿಗಳು ನೆಲೆಸಿದ್ದರು. ಚಾಮರಾಜನಗರ ಪ್ರದೇಶವು ಸಹ ಇವರ ಆಡಳಿತಕ್ಕೆ ಒಳಪಟ್ಟಿತು.ಈ ಪ್ರದೇಶದಲ್ಲಿಯೂ ಜೈನಧರ್ಮದ ಪೋಷಣೆ ಮಾಡಿದ್ದರು ಎಂಬ ವಿಷಯವು ಇಲ್ಲಿ ದೊರಕಿರುವ ಶಾಸನಗಳಿಂದ ತಿಳಿದು ಬರುತ್ತದೆ. ಚಾಮರಾಜನಗರ, ಕುಲಗಾಣ, ಬಿಳಿಗಿರಿರಂಗನಬೆಟ್ಟ ಮೊದಲಾದ ಪ್ರದೇಶದಲ್ಲಿ ಜೈನಶಾಸನಗಳು ದೊರಕಿದ್ದು ಹೊಯ್ಸಳರು ಚಾಮರಾಜನಗರ ಪ್ರಾಂತ್ಯದಲ್ಲಿ ಜೈನಧರ್ಮಕ್ಕೆ ನೀಡಿದ ಪ್ರೋತ್ಸಾವು ಇದರಿಂದ ತಿಳಿಯುತ್ತದೆ.

## ಪರಾಮರ್ಶನ ಗ್ರಂಥಗಳು


1. ಚಾಮರಾಜನಗರ ಜಿಲ್ಲಾ ಗ್ಯಾಸೆಟೀಯರ್ –ಕರ್ನಾಟಕ ಗ್ಯಾಸೆಟೀಯರ್ ಇಲಾಖೆ ಬೆಂಗಳೂರು–2015, ಪು, ಸಂ–01
2. ಮಲೆಯೂರು ಗುರುಸ್ವಾಮಿ – ಹೊನ್ನುಹೊಳೆ ಸಂಪುಟ– 1, ಪ್ರಥಮ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ,2007 ಚಾಮರಾಜನಗರ
3. ಕನ್ನಡ ವಿಷಯ ವಿಶ್ವಕೋಶ– ಇತಿಹಾಸ ಮತ್ತು ಪುರಾತತ್ವ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು ವಿಶ್ವವಿದ್ಯಾನಿಲಯ 2009, ಪು.ಸಂ–1142
4. ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ–4 –ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು ವಿಶ್ವ ವಿದ್ಯಾನಿಲಯ, ಮೈಸೂರು ಶಾಸನ ಸಂಖ್ಯೆ–7,217,219,121,122,244,245
5. ಗೋಪಾಲ್.ಅರ್. –ಚಾಮರಾಜನಗರ ಜಿಲ್ಲಾ ಇತಿಹಾಸ ಮತ್ತು ಪುರತತ್ವ, ಕರ್ನಾಟಕ ರಾಜ್ಯ ಪುರಾತತ್ವ ನಿರ್ದೇಶನಾಲಯ ಮೈಸೂರು–2017
6. ಕಾಳಸ್ವಾಮಿ. ಹೆಚ್.ಎನ್–ಚಾಮರಾಜನಗರ ಜಿಲ್ಲೆಯ ಜೈನ ಬಸದಿಗಳು – ಮೈಸೂರು, 2020
7. ಅಜಿತ ಪ್ರಸಾದ್–ಜೈನಧರ್ಮ, ಸಾಹಿತ್ಯ ಮತ್ತು ಸಂಸ್ಕೃತಿ – ಭಾಗ– 2, ಧಾರವಾಡ–2023